

ಗಂಡು ಮೂಸ್‌ನ ಕೋಡು



ಹಿಮ ಸಾರಂಗ



ಈ ಬಸ್ಸಿನಲ್ಲಿ ಒಂದು ಅಲಿಖಿತ ಕಾನೂನಿದೆ– ಪ್ರಾಣಿಗಳು ಕಣ್ಣಿಗೆ ಬಿದ್ದಾಗ ಯಾರೂ ಸದ್ದು ಮಾಡುವಂತಿಲ್ಲ, ಒಂದು ಭಾಗದ ಪ್ರಯಾಣಿಕರು ತಾವು ನೋಡಿ, ಮತ್ತೊಂದು ಭಾಗದವರಿಗೆ ಅವಕಾಶ ಕೊಡಬೇಕು. ಫೋಟೊ ತೆಗೆಯುವವರಿಗೆ ಸ್ಥಳ ಬಿಡಬೇಕು.

ಮುಂದೆ ಹೋದಂತೆ ಅಲ್ಪೈನ್ ಟರ್ನ್ಡ್ ಪ್ರದೇಶ ನಮ್ಮೆದುರು ವಿಸ್ತಾರವಾಗಿ ತೆರೆದುಕೊಂಡಿತು. ಎಡದಲ್ಲಿ ದೂರದಲ್ಲಿ ಅಲಾಸ್ಕಾ ಪರ್ವತ ಶ್ರೇಣಿ. ಅಲ್ಲಿಯವರೆಗೂ ಚಾಚಿಕೊಂಡ ಸಾವಿರಾರು ಕಿ.ಮೀ ವಿಸ್ತಾರವಾದ ಬಯಲು, ನದಿಯ ಕೊಳ್ಳಗಳು. ಚಳಿಗಾಲದಲ್ಲಿ ಪೂರ್ಣವಾಗಿ ಮಂಜಿನಿಂದ ಮುಚ್ಚಿಹೋಗುವ ಈ ಪ್ರದೇಶ ಬೇಸಿಗೆಯಲ್ಲಿ, ಬಣ್ಣ ಬಣ್ಣದ ಗಿಡಗಳಿಂದ, ಹುಲ್ಲಿನಿಂದ ತುಂಬಿ ಬಣ್ಣದ ಕಾರ್ಪೆಟ್ ಹಾಸಿದಂತೆ ಕಾಣುತ್ತದೆ.

53 ಮೈಲಿ ಪ್ರಯಾಣ ಮಾಡಿ ಇಲ್ಲಿನ ತೊಕ್ಲತ್ ನದಿಯ ದಡದ ಮೇಲಿದ್ದ ರೇಂಜರ್ ಸ್ಟೇಷನ್ ತಲುಪಿದೆವು. ಇಲ್ಲಿರುವ ರೇಂಜರ್‌ಗಳು ಈ ಪ್ರದೇಶದ ಬಗ್ಗೆ, ಪ್ರಾಣಿಗಳ ಬಗ್ಗೆ ಸಾಕಷ್ಟು ವಿವರಗಳನ್ನು ನೀಡುತ್ತಾರೆ. ಡಾಲ್ ಶೀಪ್, ಮೂಸ್ ಮುಂತಾದ ಪ್ರಾಣಿಗಳ ಕೋಡು, ತಲೆ ಬುರುಡೆ ಇತ್ಯಾದಿಗಳನ್ನೆಲ್ಲ ಇಟ್ಟುಕೊಂಡು ವಿವರಿಸುತ್ತಾರೆ. ಹೊರಗೆ ಪ್ರವಾಸಿಗರಿಗೆ ತೋರಿಸಲು ಇಟ್ಟ ಮೂಸ್ ನ ಕೋಡುಗಳು ಕಷ್ಟಪಟ್ಟು ಎತ್ತುವಷ್ಟು ಭಾರವಿದ್ದವು.

ವಂಡರ್ ಲೇಕ್

## ವಿಲಕ್ಷಣ ಗ್ರಿಸ್ಲಿ ಕರಡಿಗಳು

ಪಾಲಿ ಕ್ರೋಮ್ ಮೌಂಟನ್‌ಗಳು ನಸುಗೆಂಪು, ಹಳದಿ ಕಂದು ಬಣ್ಣಗಳಿಂದ ಕಂಗೊಳಿಸುತ್ತವೆ. ಎಡಭಾಗದ ಬಯಲಿನಲ್ಲಿ ಪೊದೆಗಳು, ಹರಿಯುವ ತೊರೆಗಳ ಆಚೆ ಈಚೆಯೆಲ್ಲ ಗ್ರಿಸ್ಲಿ ಕರಡಿಗಳು ಕಾಣಿಸಿದವು. ಈ ಗ್ರಿಸ್ಲಿ ಕರಡಿಗಳ ಜೀವನ ಕ್ರಮವೇ ವಿಲಕ್ಷಣ. ಅವುಗಳ ಭಯ ಹುಟ್ಟಿಸುವ ಆಕೃತಿ ಹಾಗೂ ಕೂದಲಿನ ನಸು ಬಂಗಾರದ ಬಣ್ಣದಿಂದಲೇ ಈ ಹೆಸರು ಬಂದಿದೆ. ಬೇಸಿಗೆ ಕಳೆದು ಹಿಮ ಮಾರುತಗಳು ಬೀಸಲಾರಂಭಿಸಿದಾಗ ಇವು ತಾವೇ ಆರಿಸಿಕೊಂಡ ಗವಿಗಳನ್ನು ಸೇರಿ ಐದಾರು ತಿಂಗಳುಗಳ ಕಾಲ ಸಮಾಧಿ ಸ್ಥಿತಿಗೆ (Hibernation) ಹೋಗುತ್ತವೆ. ಆಗ ಇವು ಆಹಾರ ಸೇವಿಸುವುದಿಲ್ಲ, ಮಲ ಮೂತ್ರ ವಿಸರ್ಜನೆ ಮಾಡುವುದಿಲ್ಲ! ಇದೇ ಕಾಲದಲ್ಲಿಯೇ ಮರಿ ಹಾಕುತ್ತವೆ. ಮರಿಗಳು ಕೇವಲ ತಾಯಿಯ ಹಾಲಿನ ಮೇಲೆಯೇ ಬದುಕಿರುತ್ತವೆ.

ಹೀಗೆ hibernationಗೆ ಹೋಗುವ ಪೂರ್ವದಲ್ಲಿ ಅಂದರೆ ಬೇಸಿಗೆಯಲ್ಲಿ, ಬಕಾಸುರನಂತೆ ತಿನ್ನುತ್ತವೆ. ಒಮ್ಮೆ ಮರಿ ದೊಡ್ಡದಾಗಿ ತಾಯಿಯನ್ನು ಬಿಟ್ಟು ಹೋದ ಮೇಲೆ ಎಲ್ಲಾದರೂ ತಾಯಿ, ಮರಿ ಎದುರಾದರೆ, ಮುಖ ಮರೆಸಿಕೊಂಡು ಹೋಗುತ್ತವಂತೆ!

ಅಲಾಸ್ಕಾದ ಕೆಲವು ಪ್ರದೇಶಗಳ ಗ್ರಿಸ್ಲಿ ಕರಡಿಗಳು ಹಿಂಗಾಲಿನ ಮೇಲೆ ನಿಂತರೆ ಸುಮಾರು ಹತ್ತು ಅಡಿ ಎತ್ತರ ನಿಲ್ಲುತ್ತವಂತೆ. (ಅಂತಹ ದೈತ್ಯ stuffed ಗ್ರಿಸ್ಲಿಯೊಂದನ್ನು ಅಲಾಸ್ಕ ವಿಮಾನ ನಿಲ್ದಾಣದಲ್ಲಿ ಗ್ಲಾಸ್ ಕೇಸ್ ನಲ್ಲಿರಿಸಿದ್ದಾರೆ.) ನಾವು ನೋಡಿದ ಹಲವಾರು ಗ್ರಿಸ್ಲಿಗಳು ಒಳ ಪ್ರದೇಶದವು.

## ವಂಡರ್ ಲೇಕ್

ವಂಡರ್ ಲೇಕ್ ಸ್ಫಟಿಕದಷ್ಟು ಸ್ವಚ್ಛ ನೀರಿನ ದೊಡ್ಡ ಸರೋವರ. ಹವಾಮಾನ ಉತ್ತಮವಾಗಿದ್ದರೆ ಮೌಂಟ್ ದೇನೇಲಿಯ ಪ್ರತಿಬಿಂಬ ಸರೋವರದ ನೀರಿನಲ್ಲಿ ಮೂಡುತ್ತದಂತೆ. ಅನ್ವೇಷಕರು ಇದನ್ನು 'ವಂಡರ್ ಲೇಕ್' ಎಂದು ಉದ್ಗರಿಸಿದ್ದಾರೆ. ನಾವು ಹೋದಾಗ ಅಂತಹ ಪ್ರತಿಬಿಂಬ ಸರಿಯಾಗಿ ಮೂಡಿರಲಿಲ್ಲ.

ಈಲ್ಸನ್ ವಿಸಿಟರ್ಸ್ ಸೆಂಟರ್‌ನ ಹಿಂದೆ ಮುಂದೆ ಅಲ್ಲಲ್ಲಿ ಕ್ಯಾರಿಬೋ ಗಳು ಮೇಯುತ್ತಿರುವುದು, ಮಲಗಿರುವುದು ಕಣ್ಣಿಗೆ ಬಿತ್ತು. ಈ ಹಿಮ ಸಾರಂಗಗಳನ್ನು, ಎಸ್ಕಿಮೋ ಗಳು ಸ್ಲೆಜ್ ಗೆ ಕಟ್ಟಿ ಪ್ರಯಾಣಿಸುವ ಚಿತ್ರಗಳನ್ನು

